CC 98/23
CW 3 – PW 3

**3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಚನ್ನರಾಯಪಟ್ಟಣ**

| | |
|---|---|
| ಸಾಕ್ಷಿದಾರರ ಹೆಸರು | **ಬಸವರಾಜು** |
| ತಂದೆಯ ಹೆಸರು | **ಮಂಜೇಗೌಡ** |
| ವಯಸ್ಸು | **35 ವರ್ಷ** |
| ವೃತ್ತಿ | **ವ್ಯವಸಾಯ** |
| ವಾಸಸ್ಥಳ | **ಪೂಮಡಿಹಳ್ಳಿ ಗ್ರಾಮ** |
| ಪ್ರಮಾಣ ವಚನ ಬೋಧಿಸಿದ ದಿನಾಂಕಃ | **12.09.2025** |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

1) ನನಗೆ ಚಾಸಾ–1, 2 ಮತ್ತು 4 ರಿಂದ 6ರವರು ಗೊತ್ತು. ಆರೋಪಿತರು ಗೊತ್ತು. ದಿನಾಂಕಃ 02.09.2022ರಂದು ಸಂಜೆ 5–30ಗಂಟೆ ಸಮಯದಲ್ಲಿ ನಾನು ಪೂಮಡಿಹಳ್ಳಿ ಗ್ರಾಮದ ಪಾರ್ವತಮ್ಮರವರ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದಾಗ 1 ಮತ್ತು 2ನೇ ಆರೋಪಿತರು ಪಾರ್ವತಮ್ಮರವರನ್ನು ನಮ್ಮ ಜಮೀನಿನಲ್ಲಿ ಏಕೆ ಉಳುಮೆ ಮಾಡುತ್ತಿದ್ದೀರಿ ಎಂದು ಕೇಳಿದರು. ಆಗ ಚಾಸಾ–1 ಮತ್ತು 1ನೇ ಆರೋಪಿಯು ಪರಸ್ಪರ ಬೈಯ್ದಾಡಿದರು. ಅಲ್ಲೇ ಇದ್ದ ಒಂದು ದೊಣ್ಣೆಯಿಂದ 1ನೇ ಆರೋಪಿಯು ಚಾಸಾ–1ರವರ ಬಲಗೈಗೆ ಹೊಡೆದನು. ಚಾಸಾ–2 ಮತ್ತು ನಾನು ಅವರನ್ನು ಜಗಳ ಬಿಡಿಸಿ ಸಮಾಧಾನಪಡಿಸಿದೆವು. ಆನಂತರ ಚಾಸಾ–1ರವರ ಅಳಿಯ ಚಾಸಾ–4ರವರು ಅವರನ್ನು ಹಿರಿಸಾವೆ ಆಸ್ಪತ್ರೆಗೆ ಕರೆದುಕೊಂಡು ಹೋದರು.

2) ಮರುದಿನ ನಾನು ಪೊಲೀಸ್ ಠಾಣೆಗೆ ಹೋಗಿ ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದಲ್ಲಿರುವ ದೊಣ್ಣೆಯನ್ನು ನೋಡಿ ಸಾಕ್ಷಿಯು ಆ ದಿನ 1ನೇ ಆರೋಪಿಯು ಚಾಸಾ–1 ರವರಿಗೆ ಹೊಡೆದ ದೊಣ್ಣೆ ಎಂದು ಗುರುತಿಸಿರುತ್ತಾರೆ, ಅದು ಈಗಾಗಲೆ ಮು.ಮಾ–1 ಎಂದು ಗುರುತಿಸಲ್ಪಟ್ಟಿರುತ್ತದೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ, ಆರೋಪಿತರು ಈ ದಿನ ಗೈರುಹಾಜರಿದ್ದು ಅವರ ಗುರುತಿಸುವಿಕೆ ಬಗ್ಗೆ ಆರೋಪಿ ಪರ ವಕೀಲರ ತಕರಾರು ಇರುವುದಿಲ್ಲ

*(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರ್ಕಾರಿ ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ವಾದ ಆಲಿಸಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)*

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ**

2) ಆರೋಪಿತರು ಚಾಸಾ–1ರವರನ್ನು ಜಮೀನು ಉಳುಮೆ ಮಾಡುತ್ತಿರುವ ಬಗ್ಗೆ ಪ್ರಶ್ನಿಸಿದಾಗ ಚಾಸಾ–1ರವರು ನಾನು ನಮ್ಮ ಜಮೀನನ್ನು ಮಾತ್ರ ಉಳುಮೆ ಮಾಡಿಸುತ್ತಿದ್ದೇನೆ ಎಂದು ತಿಳಿಸಿದಾಗ ಆರೋಪಿತರು ಚಾಸಾ–1ರವರಿಗೆ ನನಗೆ ಎದುರುತ್ತರ ಕೊಡುತ್ತೀಯಾ ಎಂದು ಅವಾಚ್ಯ ಶಬ್ಧಗಳಿಂದ ಬೈದಿರುತ್ತಾರೆ ಎಂದರೆ ಸರಿ. 1ನೇ ಆರೋಪಿಯು ಚಾಸಾ–1ರವರ ಜುಟ್ಟು ಹಿಡಿದು ಎಳೆದಾಡಿದ್ದಾರೆ ಎಂದರೆ ಸರಿ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಎಸ್.ಜಿ. ವಕೀಲರಿಂದಃ**

3) ಟ್ರಾಕ್ಟರ್ ಸಂಖ್ಯೆ ಕೆಎ–47 ಟಿಎ–4750 ನನಗೆ ಸೇರಿದ್ದಾಗಿರುತ್ತದೆ. ಚಾಸಾ–1ರವರ ಜಮೀನು ಊರಿಗೆ ಹೊಂದಿಕೊಂಡಂತೆ ಇದೆ. ಆರೋಪಿತರು ಮತ್ತು ಚಾಸಾ–1ರವರ ಮನೆ ಅಕ್ಕಪಕ್ಕದಲ್ಲಿದೆ. ಉಳುಮೆ ಮಾಡುತ್ತಿದ್ದ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಆ ದಿನ ಗಲಾಟೆ ಸಂಜೆ 5–30 ರಿಂದ 6 ಗಂಟೆವರೆಗೆ ನಡೆದಿರುತ್ತದೆ. ಗಲಾಟೆಯ ಸಮಯದಲ್ಲಿ ಸುಮಾರು 15 ರಿಂದ 20 ಜನ ಸ್ಥಳದಲ್ಲಿ ಸೇರಿದ್ದರು.

4) ಚಾಸಾ–2ರವರು ಚಾಸಾ–1ರವರ ಬಾವ ಎಂದರೆ ಸರಿ. ಚಾಸಾ–1ರವರ ಜಮೀನನ್ನು ಉಳುಮೆ ಮಾಡಿ ನಾನು ಮನೆಗೆ ಹೋಗಿದ್ದು ಗಲಾಟೆ ಶಬ್ಧ ಕೇಳಿ ಸ್ಥಳಕ್ಕೆ ಬಂದಿರುತ್ತೇನೆ. ಗಲಾಟೆ ನಡೆದ ಸ್ಥಳಕ್ಕೂ ನಮ್ಮ ಮನೆಗೂ 200 ಮೀಟರ್ ಗಳ ಅಂತರವಿರಬಹುದು. ನಾನು ಸ್ಥಳಕ್ಕೆ ಬರುವಷ್ಟರಲ್ಲಿ ಚಾಸಾ–1ರವರಿಗೆ ಹೊಡೆದಿದ್ದು ಸ್ಥಳದಲ್ಲಿ 15 ರಿಂದ 20 ಜನ ಸೇರಿದ್ದರು. ನಾನು ಸ್ಥಳಕ್ಕೆ ಬಂದಾಗ ಅಲ್ಲಿದ್ದ ಜನರು ಚಾಸಾ–1 ಮತ್ತು ಆರೋಪಿತರಿಗೆ ಬುದ್ಧಿವಾದ ಹೇಳುತ್ತಿದ್ದರು ಎಂದರೆ ಸರಿ. ನಾನು ಉಳುಮೆ ಮಾಡುತ್ತಿದ್ದ ಜಮೀನು 1ನೇ ಆರೋಪಿಗೆ ಸೇರಬೇಕು ಎಂದು ಕೇಳುತ್ತಿದ್ದರು ಎಂದರೆ ಸರಿ.

5) ಪೊಲೀಸರು ಹೇಳಿಕೆ ಪಡೆಯಲು ಊರಿಗೆ ಮರುದಿನ ಬೆಳಿಗ್ಗೆ 10 ರಿಂದ 10–30ಗಂಟೆ ಸಮಯದಲ್ಲಿ ಬಂದಿದ್ದರು. ನನ್ನ ಹೇಳಿಕೆಯನ್ನು ಯಾರು ಬರೆದುಕೊಂಡರು ಎಂದು ನನಗೆ ಗೊತ್ತಿಲ್ಲ. ದಿಃ 03.09.2022ರಂದು ಪೊಲೀಸರಿಗೆ ನೀಡಿರುವ ಹೇಳಿಕೆಯಲ್ಲಿನ ವಿಚಾರಗಳನ್ನು ನಾನು ಹೇಳಿ ಬರೆಸಿರುವುದಿಲ್ಲ. ನಾನು ನನ್ನ ಹೇಳಿಕೆಯಲ್ಲಿ ಪೊಲೀಸ್ ಠಾಣೆಗೆ ಹೋಗಿ ಹೇಳಿಕೆ ನೀಡಿರುತ್ತೇನೆ ಎಂದು ಹೇಳಿರುವುದಿಲ್ಲ. ಚಾಸಾ–1ರವರಿಗೆ ಯಾರು ಹೊಡೆದರು ಎಂದು ನಾನು ನೋಡಿರುವುದಿಲ್ಲ, ಸಾಕ್ಷಿ ಮುಂದುವರೆದು ದೊಣ್ಣೆ ಅಲ್ಲೇ ಬಿದ್ದಿತ್ತು ಎಂದು ನುಡಿಯುತ್ತಾರೆ. ಎಂಒ–1ರಂತಿರುವ ದೊಣ್ಣೆಯನ್ನು ಗುರುತಿಸಲು ಏನಾದರು ವಿಶೇಷ ಗುರುತು ಇಟ್ಟುಕೊಂಡಿದ್ದೀರಾ ಎಂದರೆ ಸಾಕ್ಷಿಯು ಅಲ್ಲಿ ಮು.ಮಾ–1ರಂತಿರುವ ದೊಣ್ಣೆಗಳು ಬಿದ್ದಿದ್ದವು ಎಂದು ನುಡಿಯುತ್ತಾರೆ.

6) ಪ್ರಕರಣ ದಾಖಲಾಗಿರುವ ಬಗ್ಗೆ ನನಗೆ ಮರುದಿನ ವಿಚಾರ ತಿಳಿದಿರುತ್ತದೆ. ಹಿರಿಸಾವೆ ಪೊಲೀಸರು ಬೆಳಿಗ್ಗೆ 10 ರಿಂದ 10–30ರ ಸಮಯದಲ್ಲಿ ನನಗೆ ಕರೆ ಮಾಡಿ ವಿಚಾರ ತಿಳಿಸಿರುತ್ತಾರೆ.

ನಾನು ಮತ್ತು ಚಾಸಾ–1ರವರು ವಿಶ್ವಾಸದಿಂದ ಇದ್ದೇವೆ. ಜಮೀನಿನ ವಿಚಾರಕ್ಕೆ ಸಂಬಂಧಿಸಿದಂತೆ ಚಾಸಾ–1 ಮತ್ತು ಆರೋಪಿತರ ನಡುವೆ ಮೊದಲಿನಿಂದಲೂ ವೈಶಮ್ಯ ಇದೆ. ಆರೋಪಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ಈ ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ. ನನಗೆ ಗಲಾಟೆ ಬಗ್ಗೆ ಏನೂ ಗೊತ್ತಿಲ್ಲದಿದ್ದರೂ ಚಾಸಾ–1ರವರು ಈ ಪ್ರಕರಣಕ್ಕೆ ಸಹಾಯವಾಗಲೆಂದು ನನ್ನನ್ನು ಸಾಕ್ಷಿ ಹಾಕಿಸಿದ್ದಾರೆ ಎಂದರೆ ಸರಿಯಲ್ಲ. ಆರೋಪಿಗಳು ಚಾಸಾ–1ರವರನ್ನು ಬೈದಿಲ್ಲ, ಕೈಹಿಡಿದು ಎಳೆದಾಡಿಲ್ಲ ಎಂದರೆ ಸರಿಯಲ್ಲ. ಗಲಾಟೆ ನಡೆದಾಗ ನಾನು ಸ್ಥಳದಲ್ಲಿಲ್ಲದ್ದರೂ ಪೊಲೀಸರ ಕೋರಿಕೆ ಮೇರೆಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.ಚನ್ನರಾಯಪಟ್ಟಣ